# ನಾಯಿ ಒಂದು ಭಾವ ಹಲವು

ಯುಗಾದಿ ವಿಶೇಷಾಂಕ 2026

ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

■ ಪ್ರಸನ್ನ ಪಿ.ಬಿ.
ಕಲೆ: ಸಂತೋಷ್ ಸಸಿಹಿತ್ಲು

ನಮ್ಮ ಋಷಿಮುನಿಗಳಿಗೆ, ದೇವಾನುದೇವತೆಗಳಿಗೆ ನಾಯಿ ಅಪವಿತ್ರ ಅಲ್ಲ. ಅರ್ಜೆಂಟಿಗೆ ಏನೂ ಸಿಗದಿದ್ದಾಗ ವಿಶ್ವಾಮಿತ್ರ ನಾಯಿ ಮಾಂಸವನ್ನು ತಿನ್ನಬೇಕಾಯಿತಂತೆ!

ನಾಯಿಮರಿ ನಾಯಿಮರಿ ತಿಂಡಿ ಬೇಕೇ? ಪದ್ಯವನ್ನು ನಾವು ಬಾಲ್ಯದಲ್ಲಿ ಕಲಿತಿದ್ದೆವು. ತುಂಬ ಖುಷಿ ಕೊಟ್ಟ ಪದ್ಯ ಅದು. ತಿಂಡಿ ಬೇಕು ತೀರ್ಥ ಬೇಕು ಎಲ್ಲ ಬೇಕು ಎಂದು ನಾಯಿ ಮರಿ ಉತ್ತರ ಕೊಡುತ್ತ ಹೇಳುವಾಗ, ತೀರ್ಥ ಎಂದರೆ ದೇವಾಲಯಗಳಲ್ಲಿ ಕೊಡುವ ತೀರ್ಥ ಎಂದೇ ನಾನು ಭಾವಿಸಿದ್ದೆ. ನಾವು ತೀರ್ಥ ತೆಗೆದುಕೊಂಡು ಪುನೀತರಾದಂತೆ ನಾಯಿಯೂ ಕೂಡ ಅದನ್ನು ತೆಗೆದುಕೊಂಡು ಪಾವನವಾಗುತ್ತದೆ ಎಂದು ನಾನು ಭಾವಿಸಿದ್ದೆ. ಮಾತ್ರವಲ್ಲ ನಾಯಿಗೂ ಭಕ್ತಿ ಇದೆ ಎಂದು ಎಣಿಸಿದ್ದೆ. ಹೈಸ್ಕೂಲಿಗೆ ಬಂದಾಗ ತೀರ್ಥ ಎಂದರೆ ಹೆಂಡ ಇರಬಹುದೇ ಎನ್ನುವ ಕುಚೋದ್ಯದ ಆಲೋಚನೆ ಬಂದಿತ್ತು. ಅದು ಒಂದು ಜೋಡಿ ಪದ ಅಷ್ಟೇ ಎಂಬ ವಿಷಯ ಆಮೇಲೆ ಗೊತ್ತಾದದ್ದು.

ಅದು ಯಾಕೋ ಗೊತ್ತಿಲ್ಲ ನನಗೆ ಬಾಲ್ಯದಿಂದಲೂ ನಾಯಿ, ಬೆಕ್ಕುಗಳನ್ನು ಕಂಡರೆ ತುಂಬ ಪ್ರೀತಿ. ಶಾಲೆಯಿಂದ ಬರುವಾಗ ಮುದ್ದಾದ ಬೆಕ್ಕಿನ ಮರಿಗಳು ಕಂಡರೆ ಎತ್ತಿಕೊಂಡು ಮನೆಗೆ ತರುತ್ತಿದ್ದೆ. ಹಾಗೆಯೇ ತಂದ ಬೆಕ್ಕುಗಳು ಮನೆಯಲ್ಲಿ ನಾಲ್ಕೈದಾದವು. ಮನೆಯಲ್ಲಿ ತುಂಬ ಹೆಚ್ಚಾಗಿದ್ದ ಇಲಿಯ ಕಾಟಕ್ಕೆ ಬೆಕ್ಕುಗಳು ಉಪಕಾರಿ ಆಗಬಹುದು ಎಂದು ಭಾವಿಸಿದ್ದೆ. ಆದರೆ ಅವು ಚೆನ್ನಾಗಿ ಅನ್ನ ಹಾಲು ಉಂಡು ಮುದುಡಿ ಮಲಗುತ್ತಿದ್ದವೇ ಹೊರತು, ಇಲಿ ಮೈಮೇಲೆ ಬಿದ್ದು ಓಡಾಡಿದರೂ ಎಂಥದೂ ಮಾಡುತ್ತಿರಲಿಲ್ಲ.

‘ಈ ಬೆಕ್ಕುಗಳಿಗೆ ಅನ್ನ ಹಾಕುವ ಬದಲು ಒಂದು ನಾಯಿ ಏನಾದ್ರೂ ಸಾಕಿದ್ದರೆ ಒಂದಿಷ್ಟು ಮನೆಗಾದರೂ ರಕ್ಷಣೆ ಇರುತ್ತಿತ್ತು’ ಎಂದು ಅಮ್ಮ ಆಗಾಗ ಹೇಳುತ್ತಿದ್ದರು. ಒಂದು ದಿನ ಶಾಲೆ ಬಿಟ್ಟು ಬರುವಾಗ ನಾಯಿ ಮರಿಯೊಂದು ಮಳೆಯಲ್ಲಿ ತೊಯ್ದು ಹೋಗಿತ್ತು. ಪಾಪ ಕಂಡು ಅದನ್ನು ಎತ್ತಿಕೊಂಡು ಬಂದಿದ್ದೆ. ನೋಡಲು ತುಂಬ ಲಕ್ಷಣವಾಗಿಯೇ ಇತ್ತು. ಯಾವಾಗ ಅದನ್ನು ಎತ್ತಿಕೊಂಡು ಬಂದಿದ್ದೇನೋ ಅದನ್ನು ಕಂಡ ಅಜ್ಜಿ, ‘ಥುತ್! ಬ್ರಾಹ್ಮಣರ ಮನೆಯಲ್ಲಿ ನಾಯಿ ಇರಬಾರದು. ಹೇಸಿಗೆ. ನಂಗೆ ಮಡಿಗೆ ತೊಂದರೆಯಾಗುತ್ತದೆ. ಈಗಲೇ ಹೋಗಿ ಬಿಟ್ಟು ಬಾ’ ಅಂತ ತಾಕೀತು ಮಾಡಿದರು. ನಾನು ಮನಸ್ಸಿಲ್ಲದ ಮನಸ್ಸಿನಿಂದ ಹೋಗಿ ಬಿಟ್ಟು ಬಂದೆ. ಅರ್ಧ ಮುಕ್ಕಾಲು ಗಂಟೆ ಬಿಟ್ಟು ನೋಡಿದರೆ ಅದು ಮತ್ತೆ ಅಂಗಳಕ್ಕೆ ಬಂದು ನಿಂತಿತ್ತು.

